**ಒ.ಎಸ್.ನಂಬ್ರಃ 109/2019** **ಪಿ.ಡಬ್ಲ್ಯೂ: 1**

ದಿನಾಂಕಃ 31-07-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಯು.ಎಸ್.ಎಸ್. ರವರಿಂದ

ನನಗೆ ಓದಲು ಬರೆಯಲು ಬರುವುದಿಲ್ಲ. ಈ ದಾವೆ ಮತ್ತು ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ವ್ಯಯಕ್ತಿಕವಾಗಿ ಮಾಹಿತಿ ಇದೆ. ಈ ದಾವೆಯ ದಾಖಲೆಗಳ ಬಗ್ಗೆ ಓದಿಸಿ ತಿಳಿದುಕೊಂಡಿರುತ್ತೇನೆ. ನಾನು ಹಾಜರು ಪಡಿಸಿದ ದಾವಾ ಸ್ವತ್ತಿನ ಪಹಣಿಗಳು ಮಂಜು ಪೂಜಾರಿ ಒಬ್ಬರ ಹೆಸರಿನಲ್ಲಿ ಇದೆ ಎಂದರೆ ಸರಿ. ಡಿಕ್ಲರೇಶನ್ ಆದೇಶದ ಮೇರೆಗೆ ಪಹಣಿ ದಾಖಲಾಗಿದೆ ಎಂದರೆ ಸರಿ. ಮಂಜು ಪೂಜಾರಿ ಈಗ ತೀರಿಹೋಗಿರುತ್ತಾರೆ. ಮಂಜು ಪೂಜಾರಿಯವರೇ ಡಿಕ್ಲರೇಶನ್ ಕೊಟ್ಟಿರುತ್ತಾರೆ. ಮಂಜು ಪೂಜಾರಿ ಎಂದರೆ 5 ನೇ ಪ್ರತಿವಾದಿಯ ಗಂಡ ಮತ್ತು 6 ರಿಂದ 10 ನೇ ಪ್ರತಿವಾದಿಗಳ ತಂದೆ ಎಂದರೆ ಸರಿ. ನಾನು ಕೇಳುತ್ತಿರುವ ಭೂ ನ್ಯಾಯ ಮಂಡಳಿಯ ಆದೇಶ ಟಿ .ಆರ್. ಐ. ನಂಬರ್ 48/87, 48/88, 1981-82 ಎಂದರೆ ಸರಿ. ಡಿಕ್ಲರೇಶನ್ ಅರ್ಜಿ, ಆದೇಶ ಮತ್ತು ನಮೂನೆ 7 ರ ಮೂಲ ದಾಖಲೆ ನನ್ನ ಬಳಿ ಇದೆಯಾ ಎಂದರೆ ಮಂಜು ಪೂಜಾರಿಯವರ ಮಗನ ಬಳಿ ಇರುವುದಾಗಿ ನುಡಿದಿರುತ್ತಾರೆ. ಡಿಕ್ಲರೇಶನ್ ನ ಮೂಲ ದಾಖಲೆಗಳು ನನ್ನ ಬಳಿ ಇದೆ, ಮಂಜು ಪೂಜಾರಿಯವರ ವಾರಸುದಾರರ ಬಳಿ ಇಲ್ಲ ಎಂದರೆ ಸರಿಯಲ್ಲ.

ದಾವ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂಬ ಬಗ್ಗೆ ಈ ದಾವೆ ಸಲ್ಲಿಸುವ ಸಮಯದಲ್ಲಿ ನಮ್ಮ ಬಳಿ ದಾಖಲೆ ಇರಲಿಲ್ಲ. ದಾವ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂಬ ಬಗ್ಗೆ ಈಗಲೂ ನಮ್ಮ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ದಾವ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂಬ ಬಗ್ಗೆ ನ್ಯಾಯಲಯಕ್ಕೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ. ದಾವಾ ಸ್ವತ್ತಿನ ಮೇಲೆ ನಮಗೆ ಹಕ್ಕು ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಡಿಕ್ಲರೇಶನ್ ಗೆ ಸಂಬಂಧಿಸಿದ ದಾಖಲೆಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ದಾವಾ ಸ್ಥಳಗಳಲ್ಲಿ ಇದೆ ಎಂದು ಹೇಳಿರುವ ಮನೆ ನಾವೇ ಕಟ್ಟಿಸಿದ್ದು, ನಮ್ಮ ಹೆಸರಿನಲ್ಲಿಯೇ ಇದೆ. ಸಾಮಾನ್ಯವಾಗಿ ಕಂದಾಯವನ್ನು ಯಾರು ಕಟ್ಟಿದರು ಅದಕ್ಕೆ ರಶೀದಿ ಕೊಡುತ್ತಾರೆ ಎಂದರೆ ಸರಿ. ನಾನು ಹಾಜರು ಪಡಿಸಿದ ಕಂದಾಯ ರಶೀದಿಗಳಲ್ಲಿ ಮಂಜು ಪೂಜಾರಿಯ ಬಗ್ಗೆ ನೀಲು ಪೂಜಾರ್ತಿ ಎಂದು ನಮೂದಾಗಿದೆ ಎಂದರೆ ಸರಿ. ನನ್ನ ತಾಯಿ ಭಾಗಿರಥಿಯವರಿಗೆ ಬೇರೆ ಸ್ವಂತ ಆಸ್ತಿ ಇರುವುದಿಲ್ಲ. ನನ್ನ ಹೆಸರಿನಲ್ಲಿ ಬೇರೆ ಯಾವುದೇ ಸ್ವಂತ ಆಸ್ತಿಗಳು ಇರುವುದಿಲ್ಲ.

ಭಾಗಿರಥಿ ಪೂಜಾರ್ತಿ ಎಂದರೆ ಮಂಜು ಪೂಜಾರಿಯವರ ತಂಗಿ. ಅಣ್ಣ - ತಂಗಿ ಇಬ್ಬರು ಒಳ್ಳೆ ಪ್ರೀತಿಯಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ತೀರಿ ಹೋಗಿ ಎಷ್ಟು ವರ್ಷ ಆಯಿತು ಎಂದರೆ ನನಗೆ ಗೊತ್ತಿಲ್ಲ. ಮಂಜು ಪೂಜಾರಿರವರು ತೀರಿ ಹೋಗಿ ಎಷ್ಟು ವರ್ಷ ಆಯಿತು ಎಂದರೆ ನನಗೆ ಗೊತ್ತಿಲ್ಲ. ನನಗೆ ಈಗ ಸುಮಾರು 58 ರಿಂದ 60 ವರ್ಷ ಆಗಿರುತ್ತದೆ. ನನ್ನ ಅಜ್ಜಿ ರುಕ್ಕು ಪೂಜಾರ್ತಿ ರವರು ಸುಮಾರು 43 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ರುಕ್ಕು ಪೂಜಾರ್ತಿಯವರಿಗೆ ಕುಷ್ಟ ಎಂಬ ಮಗ ಇದ್ದ, ಅವರು ಹೆಂಡತಿ ಮನೆಯಾದ ಆಜ್ರಿ ಗ್ರಾಮದಲ್ಲಿ ಇದ್ದರು. ಕುಷ್ಟರವರ ಮಕ್ಕಳು ಇದ್ದಾರೆ, ಅವರ ಹೆಸರು ಪಾರ್ವತಿ ಮತ್ತು ಗಿರಿಜ. ರುಕ್ಕು ಪೂಜಾರ್ತಿಯವರಿಗೆ ಬಚ್ಚಿ ಎಂಬ ಮಗಳು ಇದ್ದರು. ಸದರಿ ಬಚ್ಚಿ ರವರ ಮಕ್ಕಳು ಇದ್ದಾರೆ. ರುಕ್ಕು ಪೂಜಾರ್ತಿಯವರಿಗೆ ಕುಷ್ಟ ಮತ್ತು ಬಚ್ಚಿ ಎಂಬ ಮಕ್ಕಳಿದ್ದು, ಅವರಿಗೆ ವಾರಸುದಾರರು ಇದ್ದಾರೆ ಎಂಬ ಬಗ್ಗೆ

ವಕೀಲರಿಗೆ ಹೇಳಿರುವುದಿಲ್ಲ ಮತ್ತು ಅವರುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೇ ಇರಲು ಕಾರಣ ಇರುವುದಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ಕಲ್ಪಿಸಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ .